**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.898/2023

ದಿನಾಂಕ 16.04.2026 ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪಿರ್ಯಾದಿ ಪರ ವಕೀಲರಿಂದ : -**

12. ಸಾಕ್ಷಿಗೆ ಈಗ ಪಿರ್ಯಾದಿ ಪರ ವಕೀಲರು ದಿಃ04.06.2021 ಹಾಗೂ 26.06.2021 ರಂದು ಸದರಿ ಸಾಕ್ಷಿ ಹಾಗೂ ಪಿರ್ಯಾದಿ ಮದ್ಯೆ ನಡೆದ ಹಣಕಾಸಿನ ವ್ಯವಹಾರದ ಸಂಬಂಧ ಸದರಿ ಬ್ಯಾಂಕಿನ ಸ್ಟೇಟ್ ಮೆಂಟ್ ನ್ನು ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ಈಗ ನಿಪಿ-6 ಎಂದು ಗುರುತಿಸಲಾಯಿತು.

13 ಅದೇ ರೀತಿ ಸದರಿ ನಿಪಿ-6 ರಲ್ಲಿ ದಿಃ29.09.2021 ರ 45 ಸಾವಿರ ರೂಗಳ ವ್ಯವಹಾರದ ಬಗ್ಗೆ ಕೂಡ ನಮೂದಾಗಿದೆ ಎಂದರೆ ಸರಿ. ದಿಃ16.10.2021 ರಲ್ಲಿ 5 ಸಾವಿರ ಬಂದಿರುತ್ತದೆಂದರೆ ಸರಿ. ಅದೇ ರೀತಿ ದಿಃ20.01.2022 ರಂದು ನನ್ನ ಖಾತೆಯಿಂದ ಪಿರ್ಯಾದಿ ಖಾತೆಗೆ 25 ಸಾವಿರ ರೂಗಳನ್ನು ವರ್ಗಾಯಿಸಿರುವ ಬಗ್ಗೆ ನಮೂದಾಗಿರುತ್ತದೆಂದರೆ ಸರಿ. ಅದೇ ರೀತಿ ದಿಃ07.02.2022 ರಂದು 3 ಸಾವಿರ ಹಣದ ವ್ಯವಹಾರದ ಬಗ್ಗೆ ನಮೂದಾಗಿದೆ ಎಂದರೆ ಸರಿ.

14. ಸಾಕ್ಷಿಗೆ ಈಗ ತಾನೇ ನ್ಯಾಯಾಲಯಕ್ಕೆ ಈ ದಿನ ಹಾಜರು ಪಡಿಸಿರುವ 2021 ರಿಂದ 30.12.2021 ರವರೆಗೂ ಇರುವ ಬ್ಯಾಂಕ್ ಸ್ಟೇಟ್ ಮೆಂಟಿನ ದಾಖಲೆಯನ್ನು ಪಿರ್ಯಾದಿ ಪರ ವಕೀಲರು ತೋರಿಸಿದ್ದು ಅದನ್ನು ಸಾಕ್ಷಿಯು ಪಿರ್ಯಾದಿಗೆ ತಾನು ಹಣ ಮರುಪಾವತಿ ಮಾಡಿರುವ ಬಗ್ಗೆ ರುಜುವಾತು ಪಡಿಸಲು ಅದನ್ನು ಹಾಜರು ಪಡಿಸಿರುವುದಾಗಿ ಹೇಳಿದ್ದು ಸದರಿ ದಾಖಲೆಯನ್ನು ಪಿರ್ಯಾದಿ ಪರ ವಕೀಲರು ಆರೋಪಿ ಪರ ಗುರುತಿಸಲು ತಕರಾರು ಇಲ್ಲ ಎಂದು ಹೇಳಿದ ಮೇರೆಗೆ ಅದನ್ನು ಈಗ ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1 ರಲ್ಲಿ ನನ್ನ ವಾಹನದ ಚಾಲಕರಿಗೆ ವೇತನ ಕೊಡುವ ಸಂಬಂಧ ತೋರಿಸಿರುವ ಯಾವುದೇ ಹಣಕಾಸಿನ ವ್ಯವಹಾರ ನಮೂದಾಗಿಲ್ಲ ಎಂದರೆ ಸರಿ. ನಾನು ಸದರಿ ಪಿರ್ಯಾದಿಗೆ ಹಣ ವಾಪಸ್ ಕೊಡುವ ಸಂಬಂಧ ನಿಪಿ-1 ನ್ನು ಕೊಟ್ಟಿದ್ದೇನೆಂದರೆ ಸರಿಯಲ್ಲ. ಸದರಿ ನಿಪಿ-

1 ನ್ನು ನಗದೀಕರಣಕ್ಕೆ ಸಲ್ಲಿಸಿದಾಗ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಬ್ಯಾಂಕಿನವರು ಷರಾ ನೀಡಿದ್ದು ಅದರಂತೆ ದಂಡವನ್ನು ಸಹ ವಹಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಕೇವಲ ಹಣವನ್ನು ಮರುಪಾವತಿ ಮಾಡುವುದನು ತಪ್ಪಿ ಸುವ ಉದ್ದೇಶದಿಂದ ಸುಳ್ಳು ಸಾಕ್ಶೈ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ**

**ಕನಕಪುರ .**